ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.628/2025

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಬಸಮ್ಮ** | | |
| **ಗಂಡನ ಹೆಸರು** | **ಸಿದ್ದಪ್ಪ** | **ಪಿಡಬ್ಲೂ:** | **4** |
| **ವಯಸ್ಸು** | **56 ವರ್ಷ** | **ಸಿಡಬ್ಲೂ:** | **5** |
| **ಉದ್ಯೋಗಃ** | **ವ್ಯವಸಾಯ** | | |
| **ವಾಸ ಸ್ಥಳಃ** | **ಕುರುಕುಂದ** | | |

**ದಿನಾಂಕ 10-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ಈ ದಿನ ನ್ಯಾಯಾಲಯದಲ್ಲಿ 2 ರಿಂದ 5 ನೇ ಆರೋಪಿತರು ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಕಲಂ 317 ಸಿ.ಆರ್.ಪಿ.ಸಿ. ಅಡಿಯಲ್ಲಿ ಅರ್ಜಿಯನ್ನು ದಾಖಲಿಸಿ, ಗುರುತಿಸುವ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದಿದ್ದರಿಂದ, ಈ ಕೆಳಕಂಡಂತೆ ಸಾಕ್ಷಿಯ ವಿಚಾರಣೆ ತೆಗೆದುಕೊಳ್ಳಲಾಯಿತು.

ಚಾಸಾ-1 ನನ್ನ ಮಗಳು. ಚಾಸಾ-2 & ರವರ ಪರಿಚಯ ಇದೆ. ಚಾಸಾ-4 ನನ್ನ ಗಂಡ. ಆರೋಪಿತರ ಪರಿಚಯ ಇದೆ.

ನನ್ನ ಮಗಳು ಮದುವೆಯಾಗಿ 12 ವರ್ಷಗಳಾಗಿವೆ. ಆಕೆಯ ಮದುವೆ ಕುರುಕುಂದಾ ಗ್ರಾಮದಲ್ಲಿ ಆಗಿತ್ತು. ಆಕೆ ಮದುವೆಯ ನಂತರ ಗಂಡನ ಮನೆಯಲ್ಲಿದ್ದಳು. ಮದುವೆಯ ನಂತರ 2 ವರ್ಷಗಳ ಕಾಲ ಮಾತ್ರ ಆಕೆಯನ್ನು 1 ನೇ ಆರೋಪಿ ಚೆನ್ನಾಗಿ ನೋಡಿಕೊಂಡಿದ್ದು, ನಂತರ ಆರೋಪಿತರು ನನ್ನ ಮಗಳಿಗೆ ಹೊಡೆಯುವುದು, ಬಡೆಯುವುದು ಮಾಡಿ ನಮ್ಮ ಮನೆಗೆ ಕರೆದುಕೊಂಡು ಬಂದು ಬಿಡುತ್ತಿದ್ದರು. ನಂತರ 2 ದಿನಗಳ ನಂತರ ನಾವು ಬುದ್ಧಿ ಹೇಳಿ ನನ್ನ ಮಗಳನ್ನು

ಬಿಟ್ಟು ಬಂದಿದ್ದೆವು. ಮತ್ತೆ ಅದೇ ರೀತಿ ಹೊಡೆಯುವುದು, ಬಡೆಯುವುದು ಮಾಡುತ್ತಿದ್ದರು. ನಂತರ ನನ್ನ ಅಳಿಯ 2 ನೇ ಮದುವೆ ಮಾಡಿಕೊಂಡಿದ್ದಾನೆ. ನಂತರ ಕೇಸ್ ಮಾಡು ಎಂದು ಹೇಳಿದ್ದರು, ಅದಕ್ಕೆ ಕೇಸ್ ಮಾಡಿದ್ದೆವು. ಪೋಲೀಸರಿಗೆ ನಾನು ಹೇಳಿಕೆ ಕೊಟ್ಟಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು, ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು.)**

**<u>ಪಾಟೀ ಸವಾಲುಃಃ ಮಾನ್ಯ ಸ.ಸ.ಅ. ರವರಿಂದಃಃ</u>**

ದಿ.10-07-2018 ರಂದು ನೀವು, ನಿಮ್ಮ ಗಂಡ ಹೊಲದಲ್ಲಿ ಕೆಲಸ ಮಾಡುತ್ತಿದ್ದಾಗ, ಯಾರೋ ಬಂದು 10-30 ರ ಸುಮಾರಿಗೆ ನಿಮ್ಮ ಅಳಿಯ & ಇತರರು ಬಂದು ನಿಮ್ಮ ಮಗಳೊಂದಿಗೆ ಜಗಳ ಮಾಡುತ್ತಿದ್ದಾರೆಂದು ತಿಳಿಸಿದ್ದರು ಎಂದರೆ ಸರಿ. ನಾವು ಮನೆಗೆ ಹೋಗಿ ನೋಡಿದಾಗ ನಮ್ಮ ಮಗಳು ಅಳುತ್ತಾ ಕುಳಿತಿದ್ದಳು ಎಂದರೆ ಸರಿ. ನೀವು ನಿಮ್ಮ ಮಗಳನ್ನು ವಿಚಾರಿಸಿದಾಗ 10 ಗಂಟೆಯ ಸುಮಾರಿಗೆ ಮನೆಯ ಅಂಗಳದಲ್ಲಿ ಕುಳಿತಿದ್ದಾಗ ಆರೋಪಿತರು ಬಂದು, ಅವಾಚ್ಯ ಶಬ್ದಗಳಿಂದ ಬೈದರು ಎಂದು ತಿಳಿಸಿದ್ದಳು ಎಂದರೆ ಸರಿ. ಇವತ್ತು ನಿನ್ನ ಬಿಡುವುದಿಲ್ಲ ಎಂದು ಹೇಳಿ, 1 ನೇ ಆರೋಪಿ ಆಕೆಯ ಕೂದಲು ಹಿಡಿದು ಎಳೆದಾಡಿ, ನೆಲಕ್ಕೆ ಕೆಡವಿ ಒದ್ದಿದ್ದನು ಎಂದು ತಿಳಿಸಿದ್ದಳು ಎಂದರೆ ಸರಿ. ಆಕೆಯ ಅತ್ತೆ ಕೈ ಹಿಡಿದು ಎಳೆದಾಡಿ ಕಪಾಳಕ್ಕೆ ಹೊಡೆದಳು, ಆಕೆಯ ಮಾವ ಕಪಾಳಕ್ಕೆ ಹೊಡೆದು & ಬೆನ್ನಿಗೆ ಗುದ್ದಿ ಒಳಪೆಟ್ಟು ಮಾಡಿದ್ದಾರೆಂದು ತಿಳಿಸಿದ್ದಳು ಎಂದರೆ ಸರಿ. ಆಗ ಆಕೆ ಚೀರಾಡುವಾಗ ಚಾಸಾ-6 & 7 ರವರು ಬಂದು ಜಗಳ ಬಿಡಿಸಿದ್ದರು ಎಂದು ತಿಳಿಸಿದ್ದಳು ಎಂದರೆ ಸರಿ. ನಂತರ ಆರೋಪಿತರೆಲ್ಲರೂ ಸೇರಿ ಆಕೆಗೆ ಅವಾಚ್ಯ ಶಬ್ದಗಳಿಂದ ಬೈದು, ನೀನು ಎಲ್ಲಿಯಾದರೂ ಸಾಯಿ, ನಮ್ಮ ಮನೆಗೆ ಬಂದರೆ ನಿನ್ನನ್ನು ಜೀವಂತ ಸುಟ್ಟು ಹಾಕುತ್ತೇವೆ, ನಂತರ ನಮ್ಮ ಮಗನಿಗೆ ಇನ್ನೊಂದು ಮದುವೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ್ದರು ಎಂದು ನಿಮಗೆ ನಿಮ್ಮ ಮಗಳು ತಿಳಿಸಿದ್ದಳು ಎಂದರೆ ಸರಿ. ಸದರಿ ವಿಷಯವಾಗಿ ನೀವು ಹೇಳಿಕೆ ಕೊಟ್ಟಿದ್ದಿರಿ ಎಂದರೆ ಸರಿ.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

1. 1, 4 ನೇ ಆರೋಪಿತರು ನನ್ನ ಖಾಸಾ ಸಹೋದರರು ಎಂದರೆ ಸರಿ. 2, 3 ನೇ ಆರೋಪಿತರು ನಿಮ್ಮ ತಂದೆ ತಾಯಿ ಎಂದರೆ ಸರಿ. ನಿಮ್ಮ ತಂದೆಗೆ ವಯಸ್ಸು 85 ರ ಮೇಲಿದೆ ಎಂದರೆ

ನನಗೆ ಗೊತ್ತಿಲ್ಲ. ನಿಮ್ಮ ತಾಯಿಗೆ ವಯಸ್ಸು 75 ರ ಮೇಲಿದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಂದೆಗೆ ವಯಸ್ಸಾಗಿರುವುದರಿಂದ ಆತ ಹಾಸಿಗೆ ಹಿಡಿದು 25 ವರ್ಷಗಳಾಗಿವೆ ಎಂದರೆ ಸರಿ.

2. ನಿಮ್ಮ & ಆರೋಪಿತರ ಮನೆ ಸ್ವಲ್ಪ ದೂರದಲ್ಲಿದೆ ಎಂದರೆ ಸರಿ. ನೀವು ಹುಟ್ಟಿದಾಗಿನಿಂದಲೂ ನಿಮ್ಮ ಸಹೋದರರನ್ನು ನೋಡಿಕೊಂಡು ಬಂದಿದ್ದೀರಿ, ಅವರ ಬಗ್ಗೆ ಮಾಹಿತಿ ಇದೆ ಎಂದರೆ ಸರಿ.

3. ನೀವು ಆಸ್ತಿಯಲ್ಲಿ ಭಾಗ ಬೇಕೆಂದು ನಿಮ್ಮ ತಂದೆಯ ವಿರುದ್ಧ ದಾವೆ ಹಾಕಿದ್ದಿರಿ ಎಂದರೆ ಸರಿ. ಅದರ ಸಂ.65/19 ಎಂದರೆ ಸರಿ. ನಿಮ್ಮ ತಾಯಿ ನಿಮ್ಮ ಗಂಡನ ಸ್ವಂತ ಅಕ್ಕ ಎಂದರೆ ಸರಿ. ನಿಮ್ಮ ತಾಯಿಯೂ ಸಹ ನಿಮ್ಮ ಗಂಡನ ವಿರುದ್ಧ ಆಸ್ತಿಯಲ್ಲಿ ಭಾಗಬೇಕೆಂದು ಕೇಸು ಹಾಕಿದ್ದಾರೆ ಎಂದರೆ ಸರಿ. ಅದರ ಸಂ.296/22 ಎಂದರೆ ಸರಿ.

4. ನಿಮ್ಮ & ಆರೋಪಿತರ ನಡುವೆ ಆಸ್ತಿಯ ಸಲುವಾಗಿ 15 ವರ್ಷಗಳಿಂದ ಗಲಾಟೆ ನಡೆಯುತ್ತಿದೆ ಎಂದರೆ ಸರಿಯಲ್ಲ. ಆಸ್ತಿಯ ಸಲುವಾಗಿ ರಾಜಿ ಪಂಚಾಯಿತಿ ಮಾಡಿದ್ದಿರಿ ಎಂದರೆ ಸರಿ. ರಾಜಿ ಪಂಚಾಯಿತಿಯಲ್ಲಿ ಅವರು ನಿಮ್ಮ ಮಾತು ಕೇಳಿಲ್ಲ ಆದ್ದರಿಂದ ಕೇಸು ಮಾಡಿದ್ದೀರಿ ಎಂದರೆ ಸರಿ.

5. ನೀವು ಹೊಲಕ್ಕೆ ಹೋದಾಗ ಘಟನೆ ಆಗಿರುತ್ತದೆ, ಆದ್ದರಿಂದ ನೀವು ಆರೋಪಿತರು ಚಾಸಾ-1 ರವರಿಗೆ ಹೊಡೆ ಬಡೆ ಮಾಡಿರುವುದನ್ನು ನೋಡಿಲ್ಲ ಎಂದರೆ ಸಾಕ್ಷಿಯು ಹಾಗೆಂದರೆ ನನ್ನ ಮಗಳು ಸುಳ್ಳು ಹೇಳುತ್ತಾಳೆಯೇ ಎನ್ನುತ್ತಾರೆ. ನಿಮಗೆ ಜಗಳದ ಬಗ್ಗೆ ಹೇಳಿದವರ ಹೆಸರು ಏನು ಎಂದರೆ ಸಾಕ್ಷಿಯು ನಾಗಪ್ಪ ಎನ್ನುತ್ತಾರೆ. ಸದರಿ ವಿಷಯವನ್ನು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ.

6. ಚಾಸಾ-6 & 7 ರವರು ನಿಮ್ಮ ಸಂಬಂಧಿಕರು ಎಂದರೆ ಸರಿ. ಅವರ ಮನೆಗಳು ನಮ್ಮ ಮನೆಯಿಂದ 2 ಕಿ.ಮೀ. ಗಿಂತ ಸ್ವಲ್ಪ ದೂರದಲ್ಲಿದೆ.

7. ನಮ್ಮ ಮನೆಯ ಸುತ್ತಮುತ್ತ ಬೇರೆ ಮನೆಗಳಿವೆ. ಚಾಸಾ-6 & 7 ರವರು ನಿಮ್ಮ & ಆರೋಪಿತರ ನಡುವೆ ಆಸ್ತಿಯ ಪಂಚಾಯಿತಿ ಮಾಡಲು ಬಂದವರು ಎಂದರೆ ಸರಿ.

8. ನಿಮ್ಮ ಮಗಳು 1ನೇ ಆರೋಪಿಯೊಂದಿಗೆ ಮದುವೆಯಾಗಿ 10 ವರ್ಷಗಳ ಕಾಲ ಸಂಸಾರ ಮಾಡಿದ್ದರೂ ಸಹ ಆಕೆಗೆ ಮಕ್ಕಳಾಗಿಲ್ಲ ಎಂದರೆ ಸಾಕ್ಷಿಯು ಅವರಿಬ್ಬರು ಚೆನ್ನಾಗಿದ್ದರೆ ಮಕ್ಕಳಾಗುತ್ತಿತ್ತು ಎನ್ನುತ್ತಾರೆ.

9. ನಿಮ್ಮ ತಂದೆ ಆಸ್ತಿಯಲ್ಲಿ ಭಾಗ ಕೊಡದ ಕಾರಣ ನೀವು & ನಿಮ್ಮ ಮಗಳು ಸೇರಿ ಆರೋಪಿತರ ವಿರುದ್ಧ ಸುಳ್ಳು ಕೇಸು ಮಾಡಿದ್ದೀರಿ ಎಂದರೆ ಸರಿಯಲ್ಲ. ಸಿವಿಲ್ ಪ್ರಕರಣಕ್ಕೆ ಅನುಕೂಲ ಆಗಲೆಂದು ಕ್ರಿಮಿನಲ್ ಪ್ರಕರಣ ಹಾಕಿದ್ದೀರಿ ಎಂದರೆ ಸರಿಯಲ್ಲ.

10. ಆರೋಪಿತರು ಯಾವುದೇ ತೊಂದರೆ ಕೊಟ್ಟಿಲ್ಲ, ಹೊಡೆ ಬಡೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಜೀವದ ಬೆದರಿಕೆ ಹಾಕಿಲ್ಲ, ಕೂದಲು & ಸೀರೆ ಹಿಡಿದು ಎಳೆದಾಡಿಲ್ಲ, ಆಸ್ತಿಯಲ್ಲಿ ಭಾಗ ಕೊಡುತ್ತಾರೆಂದು ಈ ರೀತಿ ಸುಳ್ಳು ಕೇಸ್ ಹಾಕಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ., ಸಿಂಧನೂರು.**